ಜನವರಿ
2025

ಕರ್ನಾಟಕ ಸರ್ಕಾರ

ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆ

## ಗ್ರಾಮೀಣ ಕುಡಿಯುವ ನೀರು ಮತ್ತು ನೈರ್ಮಲ್ಯ ಇಲಾಖೆ

# ಸ್ವಚ್ಛತಾವಾಣಿ ವಾರ್ತಾಪತ್ರ




1

### ಕೇಂದ್ರ ಜಲಶಕ್ತಿ ಸಚಿವ ಶ್ರೀ ಸಿ.ಆರ್ ಪಾಟೀಲ್ ಅಧ್ಯಕ್ಷತೆಯಲ್ಲಿ SBMG ಯೋಜನೆಯ ಪ್ರಗತಿ ಪರಿಶೀಲನಾ ಸಭೆ

ಶ್ರೀ ಸಿ.ಆರ್. ಪಾಟೀಲ್, ಮಾನ್ಯ ಕೇಂದ್ರ ಜಲಶಕ್ತಿ ಸಚಿವರ ಅಧ್ಯಕ್ಷತೆಯಲ್ಲಿ ಕೇಂದ್ರ ಜಲಶಕ್ತಿ ಸಚಿವಾಲಯ, ನವದೆಹಲಿಯಲ್ಲಿ ನಡೆದ ಕರ್ನಾಟಕದ SBMG ಯೋಜನೆಯ ಪ್ರಗತಿ ಪರಿಶೀಲನಾ ಸಭೆಯಲ್ಲಿ ಮಾನ್ಯ ಕೇಂದ್ರ ಜಲಶಕ್ತಿ ಮಂತ್ರಾಲಯ ಹಾಗೂ ರೈಲ್ವೆ ಖಾತೆಗಳ ರಾಜ್ಯ ಸಚಿವರಾದ ಶ್ರೀ ವಿ. ಸೋಮಣ್ಣ ಹಾಗೂ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಸಚಿವರಾದ ಶ್ರೀ ಪ್ರಿಯಾಂಕ್ ಖರ್ಗೆ ಅವರು ಭಾಗವಹಿಸಿದ್ದರು. ಸಭೆಯಲ್ಲಿ ಅಪರ ಮುಖ್ಯ ಕಾರ್ಯದರ್ಶಿ, RDPR, ಶ್ರೀ ಅಂಜುಮ್ ಪರ್ವೇಜ್, RDWSD ನಿರ್ದೇಶಕರಾದ ಶ್ರೀ ನಾಗೇಂದ್ರ ಪ್ರಸಾದ್ ಕೆ; ಮುಖ್ಯ ಅಭಿಯಂತರರು, ಶ್ರೀ ಎಜಾಜ್ ಹುಸೇನ್ ; ಉಪಕಾರ್ಯದರ್ಶಿ(ಅಭಿವೃದ್ಧಿ) ಶ್ರೀ ಎಸ್.ಸಿ ಮಹೇಶ್; ಉಪಕಾರ್ಯದರ್ಶಿ (ಆಡಳಿತ) ಶ್ರೀ ಜಾಫರ್‌ಶರೀಫ್ ಸುತಾರ, ಕೇಂದ್ರ ಸರ್ಕಾರದ ಹಿರಿಯ ಅಧಿಕಾರಿಗಳು ಸೇರಿದಂತೆ ಇನ್ನಿತರ ಗಣ್ಯ ವ್ಯಕ್ತಿಗಳು ಉಪಸ್ಥಿತರಿದ್ದರು.



2

### 2025ರ ನೂತನ ವಾರ್ಷಿಕ ಕ್ಯಾಲೆಂಡರ್ ಬಿಡುಗಡೆಗೊಳಿಸಿದ ಸಚಿವ ಪ್ರಿಯಾಂಕ್ ಖರ್ಗೆ

ಮಾನ್ಯ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಸಚಿವರಾದ ಪ್ರಿಯಾಂಕ್ ಖರ್ಗೆ ಅವರು ಗ್ರಾಮೀಣ ಕುಡಿಯುವ ನೀರು ಮತ್ತು ನೈರ್ಮಲ್ಯ ಇಲಾಖೆ ವತಿಯಿಂದ ಹೊರತಂದಿರುವ 2025ರ ನೂತನ ವಾರ್ಷಿಕ ಕ್ಯಾಲೆಂಡರ್ ಬಿಡುಗಡೆ ಮಾಡಿದರು. ಈ ಸಂದರ್ಭದಲ್ಲಿ ಶ್ರೀ ಅಂಜುಮ್ ಪರ್ವೇಜ್, ಅಪರ ಮುಖ್ಯ ಕಾರ್ಯದರ್ಶಿ, RDPR; RDWSD ನಿರ್ದೇಶಕರಾದ ಶ್ರೀ ನಾಗೇಂದ್ರ ಪ್ರಸಾದ್ ಕೆ., ಮುಖ್ಯ ಅಭಿಯಂತರರಾದ ಶ್ರೀ ಎಜಾಜ್ ಹುಸೇನ್, ಉಪಕಾರ್ಯದರ್ಶಿ (ಆಡಳಿತ), ಶ್ರೀ ಜಾಫರ್ ಶರೀಫ್ ಸುತಾರ ಸೇರಿದಂತೆ ಇನ್ನಿತರರು ಉಪಸ್ಥಿತರಿದ್ದರು.




3

### RDPR ಅಪರ ಮುಖ್ಯ ಕಾರ್ಯದರ್ಶಿ ಶ್ರೀ ಅಂಜುಮ್ ಪರ್ವೇಜ್ ಅಧ್ಯಕ್ಷತೆಯಲ್ಲಿ SBMG, JJM ಕುರಿತು ಪ್ರಗತಿ ಪರಿಶೀಲನಾ ಸಭೆ

ಶ್ರೀ ಅಂಜುಮ್ ಪರ್ವೇಜ್, ಅಪರ ಮುಖ್ಯ ಕಾರ್ಯದರ್ಶಿ, RDPR; ಅವರ ಅಧ್ಯಕ್ಷತೆಯಲ್ಲಿ ಇಂದು ಬೆಂಗಳೂರಿನಲ್ಲಿ ಸ್ವಚ್ಛ ಭಾರತ್ ಮಿಷನ್(ಗ್ರಾ) ಹಾಗೂ ಜಲಜೀವನ್ ಮಿಷನ್ ಕುರಿತು ಪ್ರಗತಿ ಪರಿಶೀಲನಾ ಸಭೆ ನಡೆಯಿತು. ಸಭೆಯಲ್ಲಿ RDWSD ನಿರ್ದೇಶಕರು, ಶ್ರೀ ನಾಗೇಂದ್ರ ಪ್ರಸಾದ್ ಕೆ; ಮುಖ್ಯ ಅಭಿಯಂತರರು, ಶ್ರೀ ಎಜಾಜ್ ಹುಸೇನ್ ; ಉಪಕಾರ್ಯದರ್ಶಿ(ಅಭಿವೃದ್ಧಿ ), ಶ್ರೀ ಎಸ್.ಸಿ.ಮಹೇಶ್; ಮುಖ್ಯ ಲೆಕ್ಕಾಧಿಕಾರಿ ಶ್ರೀಮತಿ ಪಾರ್ವತಿ ಹೆಚ್.ಬಿ.; ಉಪಕಾರ್ಯದರ್ಶಿ(ಆಡಳಿತ) ಶ್ರೀ ಜಾಫರ್ ಶರೀಫ್ ಸುತಾರ ಸೇರಿದಂತೆ ಇತರ ಅಧಿಕಾರಿಗಳು ಉಪಸ್ಥಿತರಿದ್ದರು.



4

### RDWSD ನಿರ್ದೇಶಕ ಶ್ರೀ ನಾಗೇಂದ್ರ ಪ್ರಸಾದ್ ಕೆ. ಅಧ್ಯಕ್ಷತೆಯಲ್ಲಿ SBMG, JJM ಯೋಜನೆಗಳ ಪ್ರಗತಿ ಪರಿಶೀಲನಾ ಸಭೆ

ಶ್ರೀ ನಾಗೇಂದ್ರ ಪ್ರಸಾದ್ ಕೆ., ನಿರ್ದೇಶಕರು, ಗ್ರಾಮೀಣ ಕುಡಿಯುವ ನೀರು ಮತ್ತು ನೈರ್ಮಲ್ಯ ಇಲಾಖೆ ಅವರ ಅಧ್ಯಕ್ಷತೆಯಲ್ಲಿ ವಿಜಯನಗರ ಜಿ.ಪಂ ಸಭಾಂಗಣದಲ್ಲಿ ಜಲಜೀವನ್ ಮಿಷನ್ ಮತ್ತು ಸ್ವಚ್ಛ ಭಾರತ್ ಮಿಷನ್ (ಗ್ರಾ) ಯೋಜನೆಗಳ ಪ್ರಗತಿ ಪರಿಶೀಲನಾ ಸಭೆ ನಡೆಯಿತು. ಈ ಸಂದರ್ಭದಲ್ಲಿ RDWSD ಉಪಕಾರ್ಯದರ್ಶಿ (ಅಭಿವೃದ್ಧಿ) ಶ್ರೀ ಎಸ್.ಸಿ.ಮಹೇಶ್, ಉಪಕಾರ್ಯದರ್ಶಿ (ಆಡಳಿತ) ಶ್ರೀ ಜಾಫರ್ ಶರೀಫ್ ಸುತಾರ, ವಿಜಯನಗರ ಜಿ.ಪಂ ಉಪಕಾರ್ಯದರ್ಶಿ, CAO, EE ಉಪಸ್ಥಿತರಿದ್ದರು. ಎಲ್ಲಾ ತಾಲ್ಲೂಕುಗಳ ತಾ.ಪಂ EOಗಳು, AD, AEE, AE, JE, ಜಿಲ್ಲಾ ಸಮಾಲೋಚಕರು, DTSU ಸಿಬ್ಬಂದಿ ಮತ್ತಿತರರು ಸಭೆಯಲ್ಲಿ ಭಾಗವಹಿಸಿದರು.



5

### ಹೊಸಪೇಟೆ ನೀರು ಶುದ್ಧಿಕರಣ ಘಟಕ ಪರಿವೀಕ್ಷಿಸಿದ RDWSD ನಿರ್ದೇಶಕ ಶ್ರೀ ನಾಗೇಂದ್ರ ಪ್ರಸಾದ್ ಕೆ.

ಶ್ರೀ ನಾಗೇಂದ್ರ ಪ್ರಸಾದ್ ಕೆ. ನಿರ್ದೇಶಕರು, ಗ್ರಾಮೀಣ ಕುಡಿಯುವ ನೀರು ಮತ್ತು ನೈರ್ಮಲ್ಯ ಇಲಾಖೆ ಇವರು ಪಾವಗಡ ಬಹುಗ್ರಾಮ ಕುಡಿಯುವ ನೀರು ಯೋಜನೆ ಕಾಮಗಾರಿಯ ಭಾಗವಾಗಿರುವ ಹೊಸಪೇಟೆ ನೀರು ಶುದ್ಧಿಕರಣ ಘಟಕವನ್ನು ಪರಿವೀಕ್ಷಿಸಿದರು. ಈ ಸಂದರ್ಭದಲ್ಲಿ RDWSD ಮುಖ್ಯ ಅಭಿಯಂತರರಾದ ಶ್ರೀ ಎಜಾಜ್ ಹುಸೇನ್, ಉಪಕಾರ್ಯದರ್ಶಿ (ಆಡಳಿತ) ಶ್ರೀ ಜಾಫರ್ ಶರೀಫ್ ಸುತಾರ, ವಿಜಯನಗರ ಜಿ.ಪಂ ಸಿಇಒ, ಚಿತ್ರದುರ್ಗ ಜಿ.ಪಂ ಸಿಇಒ, EE ಮತ್ತಿತರರು ಉಪಸ್ಥಿತರಿದ್ದರು.

ಮನೆ ಮನೆಗೆ ಗಂಗೆ
ಜಲ ಜೀವನ್ ಮಿಷನ್

ಸ್ವಚ್ಛ ಭಾರತ
ಒಂದು ಹೆಜ್ಜೆ ಸ್ವಚ್ಛತೆಯ ಕಡೆಗೆ

ಪಂಚಮಿತ್ರ
ಸಹಾಯವಾಣಿ
8277506000